ಹಗಲೂ ರಾತ್ರಿ ಅವಳ ಮಾತೇ ಅವನನ್ನು ಕೊರೆಯಿತು. ಚೆಂದದ ಕಲ್ಲಿಗಾಗಿ ಗುಡ್ಡಗಾಡು ಅಲೆವಾಗ ಯಾವುದೋ ಒಂದು ಬಳಪದ ಕಲ್ಲಿನಲ್ಲಿ ಉಮೆ ಕಂಡೇಬಿಟ್ಟಳು. ಹೊತ್ತು ತಂದು ಹಲವು ರಾತ್ರಿ ನಿದ್ದೆಗೆಟ್ಟು ಮೂರೂವರೆ ಅಡಿ ಕಲ್ಲಿನಲ್ಲಿ ಉಮೆಯನ್ನು ಒಡಮೂಡಿಸಿ ಹಿಗ್ಗಿದನಾದರೂ ಪ್ರದರ್ಶನಕ್ಕಿಡುವ ಧೈರ್ಯ ಚಿಗುರೊಡೆಯಲೇ ಇಲ್ಲ. ರಾಮಕ್ಕ ನೋಡಿ ಗಾಬರಿ ಬಿದ್ದಳು. 'ಹಿಂಗ್ಯಾಕಪ್ಪ ಮಾಡ್ದೆ? ದೊಡ್ಡೋರ ಮನಿ ಹುಡ್ಗಿ ಅದು' ತಾಯಿ ಯಾವಾಗ ಬಾಯಿ ಬಾಯಿ ಬಡ್ಕೊಂಡ್ಳೋ ಸುಂದರಿಯ ವಿಗ್ರಹಕ್ಕೆ ಗೋಣಿಚೀಲ ಹೊದ್ದಿಸಿಬಿಟ್ಟ. ಇದು ಹಾದಿಹೋಕರ ಕುತೂಹಲ ಕೆರಳಿಸಿತು. 'ಅದೇನ್ ಕೆತ್ತಿಟ್ಟಿಯೋ ತೋರ್ಸೋ ಮಾದ' ಅಂತ ದುಂಬಾಲು ಬಿದ್ದರು. ಮಾದ ಮುನಿಸಿಕೊಂಡ. ಉಮೆಯೂ ಕೇಳಿದಳು. ಸುತ್ರಾಂ ಒಪ್ಪಲಿಲ್ಲ. ಒಂದು ದಿನ ಗೆಳತಿಯರೊಡನೆ ಬಂದವಳೇ ಮಾದ ಒಳಗಿರೋದನ್ನು ಖಾತರಿಪಡಿಸಿಕೊಂಡು ಗೋಣಿಚೀಲ ತೆಗೆದೇಬಿಟ್ಟಳು. ದಟ್ಟಮುಂಗುರುಳು, ದುಂಬಿಕಂಗಳು, ನೀಳನಾಸಿಕ, ಸೇಬುಗಲ್ಲ, ಕಿತ್ತಲೆ ತುಟಿಗಳು, ತುಂಬು ವಕ್ಷಸ್ಥಳದ ನಾಟ್ಯಭಂಗಿಯಲ್ಲಿ ನಿಂತಿರುವ ಉಮೆ. ಇದು ನಾನೇನಾ! ಆನಂದ ತುಂದಿಲಳಾದಳು. ಅದೇಕೋ ಗೆಳತಿಯರಂತೂ ತರಗುಟ್ಟಿ ನಡುಗಿದರು. ಹೊರಬಂದ ಮಾದನಿಗೂ ಕಂಪನ. 'ತೆಪ್ಪಾಗಿದ್ದರೆ ಕ್ಷಮಿಸಿ ಅಮ್ಮಾರೆ' ತೊದಲಿದ. ಪಟಪಟನೆ ಅವಳ ದುಂಬಿ ಕಂಗಳು ಬಡಿದವು. 'ಚೆನ್ನಾಗಿದೆ ಕಣೋ ಮಾದ' ಎಂದವನ ಗಲ್ಲ ಹಿಂಡಿದ್ದೇ ಓಡಿಬಿಟ್ಟಳು. ಆದರೆ ಗೆಳತಿಯರ ಹೆಜ್ಜೆಗಳು ಭಾರವಾದವು. ಮಾದ ತಟ್ಟನೆ ಗೋಣಿಚೀಲ ಮುಚ್ಚಿದ.

ಅದೆಂಗೋ ಏನೋ ಸುದ್ದಿ ಇಟ್ಟಗಿ ಬಸಯ್ಯನ ಕಿವಿಗೆ ಬಿದ್ದಾಗ ಕಿವಿಯಲ್ಲಿ ಕಾದ ಸೀಸೆ ಸುರುವಿದಂಗಾಗಿ ವ್ಯಗ್ರನಾದ. 'ಭಡವನಿಗೆ ಇಷ್ಟು ಕೊಬ್ಬಾ?' ಮಗಳೆದುರು ಕಥಕ್ಕಳಿಯಾಡಿದ ಬಸಯ್ಯ. 'ಅವನೊಬ್ಬ ಕಲಾವಿದ ಅಪ್ಪಯ್ಯ' ಎಂದವಳು ಸಮಾಧಾನ ಹೇಳಿದರೂ 'ಅವನ ಯಾವ ಕಲಾವಿದ್ನೆ ಕಲ್ಲುಕುಟಿಕಾ?' ಅಂದವನೆ ಬಾರ್ಕೋಲೆತ್ತಿಕೊಂಡು ಕಾಮಗೇತಿ ಬಾಗಿಲತ್ತ ದಾಪುಗಾಲು ಹಾಕಿದ. ಬಂದವನೆ ಕಟೆಯುತ್ತಾ ಕುಂತಿದ್ದ ಮಾದನನ್ನು ಜಾಡಿಸಿ ಒದ್ದ. ಹೊದಿಸಿದ್ದ ಗೋಣಿಚೀಲ ಎತ್ತಿ ನೋಡಿ ಪಾದರಸವಾದ. ಅದನ್ನೆತ್ತಿಕೊಂಡು ಬಿರಬಿರನೆ ಹೊರಟ ಬಸಯ್ಯನನ್ನು ಮಾದ 'ಸ್ವಾಮೆರೇ' ಅಂತ ಸರಸರನೆ ಹಿಂಬಾಲಿಸಿದ. ವಿಗ್ರಹವನ್ನೆತ್ತಿ ಕಾಮನಬಾವಿಗೆ ಎಸೆದ ಬಸಯ್ಯ ಕೋಪಾವಿಷ್ಟನಾಗಿ ಬಾರ್ಕೋಲಿನಿಂದ ಮಕಮೂತಿ ನೋಡದೆ ಬಾರಿಸಿದ. ಬಿಡಿಸಿಕೊಳ್ಳಲು ಬಂದ ನಿಂಗ, ರಾಮಕ್ಕಳಿಗೂ ಸಮಾ ಬಿದ್ದವು. ಆ ಸಮಯಕ್ಕೆ ಸೇನಾಧಿಪತಿ ಪರಶುರಾಮಪ್ಪ ಬಾರದೇ ಹೋಗಿದ್ದರೆ ಮಾದ ಜೀವಂತ ಉಳಿಯುತ್ತಿರಲಿಲ್ಲವೇನೋ. ಪರಶುರಾಮಪ್ಪ ವಿಚಾರಿಸುವ ಮೊದಲೇ ಬಸಯ್ಯ ದುಡುದುಡು ಹೊರಟು ಹೋದರೆ, ಮಾದ ಕಾಮನಬಾವಿಗೆ ಹಾರಿ ಎರಡುಮೂರು ಸಲ ಮುಳುಗು ಹಾಕಿ ತಡಕಾಡಿ ವಿಗ್ರಹದೊಂದಿಗೆ ಮೇಲೆ ಬಂದಾಗ ವಿಗ್ರಹವನ್ನು ನೋಡಿದ ಪರಶುರಾಮಪ್ಪನಿಗೆ ಎಲ್ಲವೂ ಅರ್ಥವಾಗಿ ಹೋಗಿತ್ತು. 'ದೊಡ್ಡೋರ್ನ ಎದುರು ಹಾಕ್ಕೋಬಾರ್ದಯ್ಯ. ಆದ್ದಾತು ಹುಷಾರಾಗಿರಿ' ಎಂದವರಿಗೆ ಧೈರ್ಯ ಹೇಳಿದ ಸೇನಾಧಿಪತಿ ಕುದುರೆ ಏರಿಹೋದ.

ಅದೇ ಕೋಪದಾಗೆ ಮನೆಗೆ ಬಂದ ಬಸಯ್ಯ ಮಗಳಿಗೂ ಬಾರ್ಕೋಲಿನಿಂದ ಬಾರಿಸಿದ. ಅವಳು ಜಪ್ಪಯ್ಯ ಅನ್ನಲಿಲ್ಲ. 'ಇವಳಿಗೆ ಗಂಡು ಹುಡುಕಿ ಮೊದ್ಲು ಲಗ್ನ ಮಾಡಿ ಸಾಗುಹಾಕ್ರಿ' ಗಂಗವ್ವನೂ ಜಾಡಿಸಿದಳು. ಅಣ್ಣಂದಿರಿಬ್ಬರೂ ಮುನ್ನುಗ್ಗಿದರು. 'ಪ್ರಾಣ ತೆಗೀತಿರೇನ್ರೋ ತೆಗೀರಿ. ನಾನು ಲಗ್ನವಾದ್ರೆ ಅವನ್ನೇ. ಇಲ್ಲ ಸಾಯ್ತೀನಿ' ಅಂತ ಉಮೆ ಮೈಮ್ಯಾಗೆ ದೆವ್ವ ಬಂದಂಗಾಡುವಾಗ ದಿಕ್ಕು ತೋಚದಂಗಾಗಿ ಅವಳನ್ನು ದರದರನೆ ಎಳೆದು ಕೋಣೆಗೆ ದೂಡಿ ಬೀಗ ಜಡಿದರು. ಅಳುತ್ತಾ